# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 271
2. ಸದಸ್ಯರ ಹೆಸರು : ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
3. ಉತ್ತರಿಸುವ ದಿನಾಂಕ : 11.07.2018
4. ಉತ್ತರಿಸುವ ಸಚಿವರು : ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಸಕ್ಕರೆ ಸಚಿವರು

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ. | ರಾಜ್ಯದ ಮಹಾನಗರಗಳ ವರ್ತುಲ ಪ್ರದೇಶಗಳಲ್ಲಿ ಕೈಗಾರಿಕಾಭಿವೃದ್ಧಿಗೆಂದು ರೈತರ ಭೂಮಿಗಳನ್ನು ವಶಪಡಿಸಿಕೊಂಡಿದ್ದು, ಅವುಗಳನ್ನು ಕೈಗಾರಿಕಾಭಿವೃದ್ಧಿ ಮಾಡದೇ ವಶಪಡಿಸಕೊಂಡ ರೈತರ ಜಮೀನುಗಳನ್ನು ಅವರಿಗೆ ವಾಪಸ್ಸು ಹಿಂದಿರುಗಿಸದೇ ಇರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ; | ರಾಜ್ಯದ ಮಹಾನಗರದ ವರ್ತುಲ ಪ್ರದೇಶಗಳಲ್ಲಿ ಕೆ.ಐ.ಎ.ಡಿ.ಬಿ. ವತಿಯಿಂದ ಕೈಗಾರಿಕಾ ಪ್ರದೇಶ ಅಭಿವೃದ್ಧಿ ಪಡಿಸಲು ಜಮೀನುಗಳನ್ನು ಭೂಸ್ವಾಧೀನಪಡಿಸಿಕೊಂಡಿರುವುದಿಲ್ಲ. ಆದಕಾರಣ ಜಮೀನುಗಳನ್ನು ರೈತರಿಗೆ ಹಿಂದಿರುಗಿಸುವ ಪ್ರಶ್ನೆ ಉದ್ಭವಿಸುವುದಿಲ್ಲ. |
| ಆ. | ಹಾಗಿದ್ದಲ್ಲಿ, ಕೈಗಾರಿಕಾಭಿವೃದ್ಧಿಗೆ ಬಳಸಿಕೊಳ್ಳದೇ ಇರುವ ರೈತರ ಜಮೀನುಗಳನ್ನು ರೈತರಿಗೆ ಹಿಂದಿರುಗಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು; | ಉದ್ಭವಿಸುವುದಿಲ್ಲ. |
| ಇ. | ರಾಜ್ಯ ಮಹಾನಗರಗಳಾದ ಬೆಳಗಾವಿ, ಹುಬ್ಬಳ್ಳಿ, ಧಾರವಾಡ ಮತ್ತು ಬೆಂಗಳೂರು ಪ್ರದೇಶ ಹಾಗೂ ಅದರ ವರ್ತುಲ ಪ್ರದೇಶಗಳಲ್ಲಿ ಕೈಗಾರಿಕಾಭಿವೃದ್ಧಿಗಾಗಿ 2013-14ರಿಂದ 2017-18ರವರೆಗೆ ಒಟ್ಟು ಎಷ್ಟು ಹೆಕ್ಟೇರ್ ಪ್ರದೇಶವನ್ನು ವಶಪಡಿಸಕೊಳ್ಳಲಾಗಿದೆ. ಪ್ರತಿ ಹೆಕ್ಟೇರ್‌ಗೆ ಎಷ್ಟು ಮೊತ್ತದ ಹಣವನ್ನು ನಿಗಧಿಪಡಿಸಲಾಗಿತ್ತು ಮತ್ತು ಎಷ್ಟು ಹಣವನ್ನು ಪಾವತಿಸಲಾಗಿದೆ. ಇದರಲ್ಲಿ ಒಪ್ಪಂದದ ಮೇರೆಗೆ ವಶಪಡಿಸಿಕೊಂಡ ಜಮೀನೆಷ್ಟು; ನೇರವಾಗಿ ವಶಪಡಿಸಿಕೊಂಡ ಜಮೀನು ಎಷ್ಟು; | 2013-2014ರಿಂದ 2017-18ನೇ ಸಾಲಿನವರೆಗೆ ಬೆಳಗಾವಿ ಮಹಾನಗರ ವರ್ತುಲ ಪ್ರದೇಶದಲ್ಲಿ ಯಾವುದೇ ಜಮೀನಿನ ಭೂಸ್ವಾಧೀನ ಪ್ರಕ್ರಿಯೆಯನ್ನು ಕೈಗೊಂಡಿರುವುದಿಲ್ಲ.<br><br>ಹುಬ್ಬಳ್ಳಿ-ಧಾರವಾಡ ವರ್ತುಲ ಪ್ರದೇಶದ ವ್ಯಾಪ್ತಿಯ ಧಾರವಾಡ ತಾಲ್ಲೂಕು, ಸತ್ತೂರ ಗ್ರಾಮದಲ್ಲಿ ಒಪ್ಪಿಗೆಯ ಆಧಾರದ ಮೇರೆಗೆ ಶ್ರೀ ಧರ್ಮಸ್ಥಳ ಮಂಜುನಾಥ ಎಜುಕೇಷನ್ ಸೊಸೈಟಿ ಇವರ ಉದ್ದೇಶಿತ ಯೋಜನೆಗಾಗಿ 2ಎ-36ಗು ಜಮೀನನ್ನು ಭೂಸ್ವಾಧೀನಪಡಿಸಿಕೊಳ್ಳಲಾಗಿದೆ. ಭೂಸ್ವಾಧೀನ ಪ್ರಕ್ರಿಯೆಯಲ್ಲಿ ವಿಳಂಬವಾದ ಕಾರಣ ಭೂದರ ನಿಗದಿಪಡಿಸುವ ಬಗ್ಗೆ ರೈತರು/ ಭೂಮಾಲೀಕರು ತೀವ್ರ ವಿರೋಧ ಮಾಡುತ್ತಿರುವ ಹಿನ್ನೆಲೆಯಲ್ಲಿ ಇದುವರೆವಿಗೂ ಭೂದರ ನಿಗದಿಪಡಿಸಿರುವುದಿಲ್ಲ. |

| | | |
|---|---|---|
| | (ಸಂಪೂರ್ಣ ವಿವರ ನೀಡುವುದು) | ಬೆಂಗಳೂರು ಪೂರ್ವ ತಾಲ್ಲೂಕು, ಕೆ.ಆರ್.ಪುರಂ ಹೋಬಳಿ, ಕುಂದಲಹಳ್ಳಿ ಗ್ರಾಮದ ವಿವಿಧ ಸರ್ವೆ ನಂಬರ್‌ಗಳ ಒಟ್ಟು 14-01 ಎಕರೆ ಜಮೀನನ್ನು ಮೆ:ಟೆಕ್‌ಜೋನ್ ಟೆಕ್ನಾಲಜಿಸ್ ಪ್ರೈ.ಲಿ., ಇವರಿಗೆ ಭೂಮಾಲೀಕರ ಒಪ್ಪಿಗೆಯ ಆಧಾರದ ಮೇರೆಗೆ ಭೂಸ್ವಾಧೀನಪಡಿಸಿಕೊಳ್ಳಲಾಗಿದೆ ಭೂದರ ನಿಗದಿಪಡಿಸುವ ಪ್ರಕ್ರಿಯೆ ಚಾಲ್ತಿಯಲ್ಲಿದೆ.<br><br>ಬೆಂಗಳೂರು ಉತ್ತರ ತಾಲ್ಲೂಕು, ಯಲಹಂಕ ಹೋಬಳಿ, ಶಿವನಹಳ್ಳಿ ಗ್ರಾಮದ ವಿವಿಧ ಸರ್ವೆ ನಂಬರ್‌ಗಳ ಒಟ್ಟು 6-10½ ಎಕರೆ ಜಮೀನನ್ನು ಮೆ॥ ತಾಜ್ ಜಿ.ವಿ.ಕೆ.ಹೋಟೆಲ್ಸ್ ಮತ್ತು ರೆಸಾರ್ಟ್ಸ್ ಲಿಮಿಟೆಡ್ ರವರಿಗೆ ಭೂಮಾಲೀಕರ ಒಪ್ಪಿಗೆಯ ಆಧಾರದ ಮೇರೆಗೆ ಭೂಸ್ವಾಧೀನಪಡಿಸಿಕೊಳ್ಳಲಾಗಿದೆ. ಪ್ರತಿ ಎಕರೆಗೆ ರೂ.1.90 ಕೋಟಿಗಳನ್ನು ಪರಿಹಾರ ಧನವನ್ನು ನಿಗದಿಪಡಿಸಿ ಭೂಮಾಲೀಕರಿಗೆ ಪಾವತಿಸಲಾಗಿದೆ.<br><br>ಬೆಂಗಳೂರು ಉತ್ತರ ತಾಲ್ಲೂಕು, ಯಲಹಂಕ ಹೋಬಳಿ, ಶಿವನಹಳ್ಳಿ ಗ್ರಾಮದ ಸ.ನಂ.49ರ ಪೈಕಿ ಮತ್ತು 51/3ರಲ್ಲಿ ಒಟ್ಟು 1-11½ ಎಕರೆ ವಿಸ್ತೀರ್ಣದ ಜಮೀನನ್ನು ಸ್ವಾಧೀನಪಡಿಸಿಕೊಳ್ಳಲಾಗಿದೆ. ಪ್ರತಿ ಎಕರೆಗೆ ರೂ.4.80 ಕೋಟಿಗಳ ಭೂಪರಿಹಾರವನ್ನು ನಿಗದಿಪಡಿಸಿ ಪರಿಹಾರ ಪಾವತಿಸಲಾಗಿದೆ. |
| ಈ. | ವಶಪಡಿಸಿಕೊಂಡ ಒಟ್ಟು ಜಮೀನು ಪ್ರದೇಶದಲ್ಲಿ ಎಷ್ಟು ಹೆಕ್ಟೇರ್ ಪ್ರದೇಶವನ್ನು ಕೈಗಾರಿಕಾಭಿವೃದ್ಧಿಗಾಗಿ ಬಳಸಿಕೊಳ್ಳಲಾಗಿದೆ; ಇದರಲ್ಲಿ ಕೈಗಾರಿಕಾಭಿವೃದ್ಧಿಗಾಗಿ ಹಂಚಿಕೆಯಾಗಿಯೂ ಅಭಿವೃದ್ಧಿಯಾಗದೆ ಉಳಿದ ಒಟ್ಟು ಪ್ರದೇಶ (ಜಮೀನು) ಎಷ್ಟು; ಹಂಚಿಕೆಯಾಗದೇ ಉಳಿದ ಒಟ್ಟು ಪ್ರದೇಶ (ಜಮೀನು) ಎಷ್ಟು; ಉಳಿದ ಜಮೀನನ್ನು ರೈತರಿಗೆ ಹಿಂದಿರುಗಿಸಲು ಏನು ಕ್ರಮಗಳನ್ನು ಕೈಗೊಳ್ಳಲಾಗಿದೆ? (ವಿವರ ನೀಡುವುದು) | ಬೆಳಗಾವಿ, ಹುಬ್ಬಳ್ಳಿ, ಧಾರವಾಡ ಮತ್ತು ಬೆಂಗಳೂರು ಪ್ರದೇಶ ಮತ್ತು ಅದರ ವರ್ತುಲ ಪ್ರದೇಶಗಳಲ್ಲಿ ಕೈಗಾರಿಕಾ ಪ್ರದೇಶಕ್ಕಾಗಿ ಯಾವುದೇ ಜಮೀನುಗಳನ್ನು ಭೂಸ್ವಾಧೀನಪಡಿಸಿಕೊಂಡಿರುವುದಿಲ್ಲ.<br><br>ಕ್ರಮ ಸಂಖ್ಯೆ (ಇ)ರಲ್ಲಿ ತಿಳಿಸಿರುವ ಕಂಪನಿಗಳಿಗೆ ಜಮೀನುಗಳನ್ನು ಕಂಪನಿಯವರ ಕೋರಿಕೆಯ ಮೇರೆಗೆ ಏಕ ಘಟಕ ಸಂಕೀರ್ಣ ಯೋಜನೆಯಡಿ ಭೂಸ್ವಾಧೀನಪಡಿಸಿಕೊಳ್ಳಲಾಗಿದೆ.<br><br>ಸ್ವಾಧೀನಪಡಿಸಿಕೊಂಡ ಸಂಪೂರ್ಣ ಜಮೀನನ್ನು ಉದ್ದೇಶಿತ ಯೋಜನೆಗಾಗಿ ಬಳಸಿಕೊಳ್ಳಲಾಗುತ್ತದೆ. ಆದಕಾರಣ ಜಮೀನನ್ನು ರೈತರಿಗೆ ಹಿಂತಿರುಗಿಸುವ ಪ್ರಶ್ನೆ ಉದ್ಭವಿಸುವುದಿಲ್ಲ. |

11/7/18

(ಕೆ.ಜೆ. ಜಾರ್ಜ್)

ಸಂಖ್ಯೆ: ಸಿಐ 77 ಐಎಪಿ 2018

ಬೃಹತ್ ಮತ್ತು ಮಧ್ಯಮ ಕೈಗಾರಿಕೆ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಸಕ್ಕರೆ ಸಚಿವರು